**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ 3070/2014** **CW**-16 **PW**-11

**ಸಾಕ್ಷಿಯನ್ನು ದಿಃ 01.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಮಂಜುಳ |
| ಗಂಡನ ಹೆಸರುಃ | ಸ್ವಾಮಿ ಎ ಆರ್ |
| ವಯಸ್ಸುಃ | 48 ವರ್ಷ |
| ವೃತ್ತಿಃ | ಗೃಹಿಣಿ |
| ವಾಸ ಸ್ಥಳಃ | ಅಂಕನಹಳ್ಳಿ ಗ್ರಾಮ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ಈ ಮೊದಲು ಸಂಘ ಸಂಸ್ಥೆಗಳನ್ನು ನಡೆಸಿಕೊಂಡು ಹೋಗುತ್ತಿದ್ದೆ. 2008 ರಲ್ಲಿ ಮೋಹನ್ ಮತ್ತು ಸುರೇಶ್ ರವರು ಮನೆಗೆ ಬಂದು ಸಮನ್ವಯ ಹೆಲ್ತ್ ಎಜುಕೇಶನ್ ಪರವಾಗಿ ಕಾರ್ಯದರ್ಶಿಯಾದ ಚಿದಾನಂದ, ಸಂತೋಷ್ ಕುಮಾರ್ ಮತ್ತು ಮೋಹನ್ ರವರು ಅಲ್ಲಿಗೆ ಬಂದಿದ್ದು, ಅವರ ಸಂಸ್ಥೆಯಿಂದ ಮೈಕ್ರೋ ಇನ್ಸೂರೆನ್ಸ್ ಯೋಜನೆ ಬಂದಿದ್ದು, ಗ್ರಾಮೀಣ ಕೂಲಿ ಕಾರ್ಮಿಕರಿಗೆ ಮತ್ತು ಬಡ ರೈತರಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿರುತ್ತಾರೆ. ನಾವು ಏಜೆಂಟರಾದರೆ ಶೇ 3 ರಂತೆ ಹಣ ನೀಡುವುದಾಗಿ ತಿಳಿಸಿ ಆಗ ನಾನು ಸಮನ್ವಯ ಕಛೇರಿಗೆ ಹೋಗಿದ್ದು, ಅಲ್ಲಿ ಚಿದನಂದ ರವರು ಸಂತೋಷ್ ಕುಮಾರ್ ಮತ್ತು ಮೋಹನ್ ರವರು ಅಲ್ಲಿದ್ದರು. ಮೈಸೂರು ಎಲ್ ಐ ಸಿ ಪ್ರಧಾನ ಕಛೇರಿಯ ಮ್ಯಾನೇಜರಾದ ವೆಂಕಟೇಶ್ ಮತ್ತು ಕಣ್ಣೆ ರವರು ಅಲ್ಲಿಯೇ ಇದ್ದರು. ನಾವೆಲ್ಲರೂ ಏಂಜೆಂಟರಾಗಿ ಕಾರ್ಯ ನಿರ್ವಹಿಸಲು ಒಪ್ಪಿದ್ದರಿಂದ ನನಗೆ ಕೋಡ್ ನಂಬರ್ 18 ಎಂದು ನೀಡಿರುತ್ತಾರೆ. ನಂತರ ನಾನು ಸಾರ್ವಜನಿಕರಿಗೆ 2008 ರಿಂದ 2014 ರವರೆಗೆ ಒಟ್ಟು 73 ಪಾಲಿಸಿಗಳನ್ನು ಮಾಡಿಸಿರುತ್ತೇನೆ. ಅವರು ನೀಡಿದ ಹಣವನ್ನು ಚನ್ನರಾಯಪಟ್ಟಣದ ಮೈಕ್ರೋ ಇನ್ಸೂರೆನ್ಸ್ ಕಛೇರಿಗೆ ಪಾವತಿ ಮಾಡುತ್ತಿದ್ದೆವು. ಆ ಸಮಯದಲ್ಲಿ ತ್ಯಾಗರಾಜ್, ಮೋಹನ್, ಮಮತ, ರೋಹನ್, ಬೇಬಿ ರವರು ಪಾಸ್ ಬುಕ್ ಗಳಿಗೆ ನಾವು

ನೀಡಿದ ಹಣವನ್ನು ಬರೆದುಕೊಡುತ್ತಿದ್ದರು. ಒಟ್ಟು ಹಣಕ್ಕೆ ಒಂದು ರಶೀದಿಯನ್ನು ಸಹ ನೀಡುತ್ತಿದ್ದರು. ಸದರಿ ಹಣವು ಮೈಸೂರಿನ ಪ್ರಧಾನ ಕಛೇರಿಗೆ ಹೋಗುತ್ತಿತ್ತು. ನಂತರ ಚಿದಾನಂದ್ ರವರ ಕಾರಣಾಂತರಗಳಿಂದ ಸಂಸ್ಥೆಯನ್ನು 2012 ರಲ್ಲಿ ಬಿಟ್ಟಿದ್ದು ನಂತರ ಬಾಳಿಗೊಂದು ಗುರಿ ಸಂಸ್ಥೆಯು ಇದನ್ನು ಮುಂದುವರೆಸಿಕೊಂಡು ಹೋಗುತ್ತಿದ್ದು, ಅದರಲ್ಲಿ ಕಾರ್ಯದರ್ಶಿಯಾಗಿ ಸಂತೋಷ್ ಅಧ್ಯಕ್ಷರಾಗಿ ಲಿಂಗರಾಜು ರವರು ವಹಿಸಿಕೊಂಡಿದ್ದರು. ನಂತರ ನಾವು ಬಾಳಿಗೊಂದು ಗುರಿ ಸಂಸ್ಥೆಗೆ ಹಣವನ್ನು ಪಾವತಿಸುತ್ತಿದ್ದೆವು. ಹಣವನ್ನು ಕಟ್ಟಿದ ನಂತರ ರಶೀದಿಯನ್ನು ನೀಡುತ್ತಿದ್ದರು. ನಾನು 73 ಪಾಲಿಸಿಗಳಿಂದ ಒಟ್ಟು ರೂ. 5,32,383/- ಕಟ್ಟಿರುತ್ತೇನೆ. ಸದರಿ ಹಣವು ಪ್ರಧಾನ ಕಛೇರಿಗೆ ಕೇವಲ ರೂ. 3,57,000/- ಪಾವತಿಸಿದ್ದು ಉಳಿದ ರೂ. 1,74,000/- ರೂಗಳನ್ನು ಸಂತೋಷ್ ಮತ್ತು ಚಿದಾನಂದರವರು ಕಟ್ಟಿರುವುದಿಲ್ಲ ಎಂದು ತಿಳಿಯಿತು. ಇವರನ್ನು ಬಿಟ್ಟರೆ ಬೇರೆ ಯಾರು ಗೊತ್ತಿಲ್ಲ. ನಂತರ ಪೋಲೀಸ್ ಠಾಣೆಗೆ ದೂರನ್ನು ನೀಡಿದ್ದು, ಇದರ ಸಂಬಂಧ ನಾನು ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ. ಹೇಳಿಕೆಯೊಂದಿಗೆ ನಾನು ಮಾಡಿಸಿದ್ದ ಪಾಲಿಸಿದಾರರ ಹೆಸರು ಮತ್ತು ಸಂಪೂರ್ಣ ವಿವರವನ್ನು ಪೋಲೀಸರಿಗೆ ನೀಡಿರುತ್ತೇನೆ.

ಸಾಕ್ಷಿಗೆ ಪೋಲೀಸರಿಗೆ ತಾನು ನೀಡಿದ್ದ ವರದಿಯನ್ನು ತೋರಿಸಲಾಗಿ, ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-35 ಎಂದು ಗುರುತಿಸಲಾಯಿತು.(4 ಪುಟ) ನಾನು ಏಜೆಂಟರಾಗಿ ಹೇಗೆ ಕೆಲಸ ಮಾಡಬೇಕು ಎಂದು ತರಭೇತಿ ಸಹ ನೀಡಿದ್ದರು.

ನಿಪಿ-35 ರಲ್ಲಿರುವ ಬರವಣಿಗೆ ನನ್ನದೇ ಆಗಿರುತ್ತದೆ.

ಸಾಕ್ಷಿ 1ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತಾರೆ .

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ  ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಸಾಕ್ಷಿಗೆ ನ್ಯಾಯಾಲಯದಲ್ಲಿರುವ 1ನೇ ಆರೋಪಿಯನ್ನು ತೋರಿಸಲಾಗಿ ಇವರೇ ಚಿದಾನಂದ್ ಎಂದರೆ ಸರಿ  ಎನ್ನುತ್ತಾರೆ.

**ಪಾಟೀ ಸವಾಲುಃ  ಆರೋಪಿ ಪರ ವಕೀಲರಾದ ಶ್ರೀ ಬಿ ವಿ ವಿ  ರವರಿಂದ  ಃ**

ನಾನು ಜನಗಳಿಗೆ ರಶೀದಿ ನೀಡುತ್ತಿರಲಿಲ್ಲ. ಎಷ್ಟೆಷ್ಟು ಹಣವನ್ನು ಪಾವತಿ ಮಾಡುತ್ತಿದ್ದೆ ಎಂದು ರಶೀದಿಯಲ್ಲಿ ನಮೂದು ಇದೆ. ಪೋಲೀಸರಿಗೆ ಯಾವುದೇ ರಶೀದಿ ನೀಡಿಲ್ಲ. ನಾನು 1 ರಿಂದ ಪಾಸ್ ಪುಸ್ತಕಕ್ಕೆ ಸೀಲ್ ಹಾಕಿ ಕೊಡುತ್ತಿದ್ದೆವು. ಸದರಿ ಪುಸ್ತಕವನ್ನು ಪೋಲೀಸರಿಗೆ ನೀಡಿಲ್ಲ ಎಂದರೆ ಸರಿ. ಆರೋಪೀತರಿಗೆ ಯಾವುದೇ ಹಣ ನೀಡಿಲ್ಲ ಎಂದರೆ ಸರಿಯಲ್ಲ. ನಾನೇ ಜನಗಳಿಂದ ಹಣವನ್ನು ಪಡೆದು ದುರುಪಯೋಗಪಡಿಸಿಕೊಂಡು ಆರೋಪಿತರ ವಿರುದ್ದ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ .)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**